# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE: 21/02/2020

### ಗ್ರಾಮಾಂತರ ಜಿಲ್ಲೆಗೆ ನೀರಾವರಿ ಕಲ್ಪಿಸಿ | ಅನಧಿಕೃತ ಬಡಾವಣೆಗಳಿಗೆ ಕಡಿವಾಣ ಹಾಕಿ

# ಅಧಿವೇಶನದಲ್ಲಿ ಗಮನ ಸೆಳೆದ ಶರತ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಜೆಪಿ ತೊರೆದು ಪಕ್ಷೇತರನಾಗಿ ಸ್ಪರ್ಧಿಸಿ ಮೊದಲ ಪ್ರಯತ್ನದಲ್ಲೇ ವಿಧಾನಸಭೆ ಪ್ರವೇಶಿಸಿರುವ ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಚೊಚ್ಚಲ ಅಧಿವೇಶನದಲ್ಲಿ ಸಮರ್ಥವಾಗಿ ಮಾತನಾಡಿ ಗಮನ ಸೆಳೆದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೀರಾವರಿ ಕಲ್ಪಿಸುವಂತೆ ಸರ್ಕಾರವನ್ನು ಆಗ್ರಹಿಸಿದರು.

ಉತ್ತರ ಕರ್ನಾಟಕ ಸೇರಿ 20 ಜಿಲ್ಲೆಗಳಲ್ಲಿ ನೆರೆ ಬಂದಿದ್ದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇದೆ. ಕುಡಿಯುವ ನೀರಿಗಾಗಿ 1,500 ಅಡಿ ಆಳಕ್ಕೆ ಬೋರ್‌ವೆಲ್ ಕೊರೆಸಬೇಕಾದ ಅನಿವಾರ್ಯತೆ ಇದೆ. ಈ ಜಿಲ್ಲೆಗೆ ಯಾವುದೇ ನೀರಿನ ಮೂಲಗಳಿಲ್ಲ. ಬೆಂಗಳೂರಿಗೆ ಸೊಪ್ಪು ತರಕಾರಿ ಅಲ್ಲಿಂದಲೇ ಪೂರೈಕೆಯಾಗಬೇಕಿದೆ. ಆದ್ದರಿಂದ ನೀರಾವರಿ ಕಲ್ಪಿಸಿಕೊಟ್ಟರೆ ಜಿಲ್ಲೆಯೂ ಸೇರಿ ರಾಜಧಾನಿಯ ಬಹುಪಾಲು ಸಮಸ್ಯೆಗಳು ಬಗೆಹರಿಯುತ್ತವೆ ಎಂದರು.

ಡಿಸಿ ಪರಿವರ್ತಿತ ಖಾತೆ ಹಾವಳಿಯಿಂದ ಅನಧಿಕೃತ ಬಡಾವಣೆಗಳು ತಲೆ ಎತ್ತುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿ:** ರಾಜ್ಯಪಾಲರ ಭಾಷಣದಲ್ಲಿ ಪ್ರವಾಸೋದ್ಯಮದ ಬಗ್ಗೆ ಒಂದು ಮಾತು ಇಲ್ಲದಿರುವುದು ಬೇಸರದ ಸಂಗತಿ. ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ವಿಪುಲ ಅವಕಾಶಗಳಿವೆ. ಬಿಳಿಗಿರಿ ರಂಗನಬೆಟ್ಟ, ಹಿಮವಂತಸ್ವಾಮಿ ಗೋಪಾಲಬೆಟ್ಟ, ಮಲೆ ಮಹದೇಶ್ವರ ಬೆಟ್ಟಗಳಿಗೆ ಪ್ರವಾಸಿಗರು ಬರುವ ಕಾರಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪಕ್ಷೇತರ ಶಾಸಕ ಎನ್. ಮಹೇಶ್ ಸರ್ಕಾರವನ್ನು ಒತ್ತಾಯಿಸಿದರು.




### ತುಳು ಭಾಷೆಗೆ ಮಾನ್ಯತೆ ನೀಡಿ

**ಅಂ**ದಾಜು 1 ಕೋಟಿ ಜನರು ತುಳು ಮಾತನಾಡುವವರು ರಾಜ್ಯದಲ್ಲಿದ್ದಾರೆ. ನಾಗಾರಾಧನೆ, ಭೂತಕೋಲ, ಕಂಬಳದಂತ ವಿಶೇಷ ಸಂಸ್ಕೃತಿ ತುಳುನಾಡಿನ ಜನರ ಆಚರಣೆಯಾಗಿದೆ. ನಾನು ತುಳು ಅಕಾಡೆಮಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡಿ ಅಧಿಕೃತ ಭಾಷೆಯ ಸ್ಥಾನಮಾನ ದೊರಕಿಸಿಕೊಟ್ಟರೆ ಭಾಷೆಯ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಮೂಡಬಿದರೆ ಶಾಸಕ ಅಮರನಾಥ್ ಸದನದಲ್ಲಿ ಒತ್ತಾಯಿಸಿದರು.

### ಸಹಕಾರ ಸಾರಿಗೆ ಸಂಕಷ್ಟ

ಬೆಂಗಳೂರು: ಮಲೆನಾಡು ಮತ್ತು ಕರಾವಳಿಯ ಗ್ರಾಮೀಣ ಪ್ರದೇಶದಲ್ಲಿ ನಿತ್ಯಸಂಚಾರದ ಭಾಗವಾಗಿರುವ ಸಹಕಾರ ಸಾರಿಗೆ ಸಂಸ್ಥೆಯ ಆರ್ಥಿಕ ಸಂಕಷ್ಟವು ಮೇಲ್ಮನೆಯಲ್ಲಿ ಗುರುವಾರ ಧ್ವನಿಸಿತು. ವಿಷಯ ಪ್ರಸ್ತಾಪಿಸಿದ ಡಾ. ಜಯಮಾಲಾ ರಾಮಚಂದ್ರ, ಸಂಸ್ಥೆ ಕೋರಿದ 6.60 ಕೋಟಿ ರೂ. ನೆರವಿನ ಕಡತ ಆರ್ಥಿಕ ಇಲಾಖೆಯಲ್ಲಿ ಉಳಿದಿದೆ. ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಿ ಅಗತ್ಯ ನೆರವು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

# ಸ್ಪೀಕರ್ ವಿರುದ್ಧ ತಿರುಗಿಬಿದ್ದ ರಾಮಲಿಂಗಾ ರೆಡ್ಡಿ



**ಬೆಂಗಳೂರು:** ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧವೇ ಹಿರಿಯ ಶಾಸಕ ರಾಮಲಿಂಗಾರೆಡ್ಡಿ ಆಕ್ರೋಶದಿಂದ ತಿರುಗಿಬಿದ್ದ ಪ್ರಕರಣ ನಡೆಯಿತು. ಪರಿಣಾಮ ಸ್ಪೀಕರ್ ಮತ್ತು ರಾಮಲಿಂಗಾರೆಡ್ಡಿ ನಡುವೆ ಏರು ಧ್ವನಿಯಲ್ಲಿ ವಾಗ್ಯುದ್ಧಕ್ಕೂ ಸದನ ವೇದಿಕೆಯಾಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ರಾಮಲಿಂಗಾರೆಡ್ಡಿ ಮಾತನಾಡಲು ಎದ್ದು ನಿಂತರು. ಅಷ್ಟೊತ್ತಿಗೆ ವೀರಭದ್ರಯ್ಯ ಅವರ ಹೆಸರನ್ನು ಸ್ಪೀಕರ್ ಕರೆದಿದ್ದರು. ಮೊದಲು ಅವರು ಮಾತನಾಡಲಿ, ನೀವು ಹಿರಿಯ ಸದಸ್ಯರು ಕುಳಿತುಕೊಳ್ಳಿ ಎಂದು ಸ್ಪೀಕರ್ ಹೇಳಿದ್ದು ರೆಡ್ಡಿಯವರ ಕೋಪಕ್ಕೆ ಕಾರಣವಾಯಿತು. ನನಗೆ ಡಿಕ್ಟೇಟ್ ಮಾಡ್ತಿದ್ದೀರೇನು? ನನಗೂ ಕಾನೂನು ಗೊತ್ತಿದೆ. ನೀವು ನನಗೆ ಹೇಳುವ ಅಗತ್ಯವಿಲ್ಲ ಎಂದು ರೆಡ್ಡಿ ಕಿಡಿ ಕಾರಿದರು. ನೀವು ಹೀಗೆಲ್ಲ ಮಾತನಾಡಿದರೆ ನಿಯಮಾವಳಿ ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಸ್ಪೀಕರ್ ಎಚ್ಚರಿಕೆ ನೀಡಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಪ್ರಿಯಾಂಕ ಖರ್ಗೆ ಮತ್ತು ಎಂ.ಬಿ. ಪಾಟೀಲ್ ಅವರು ರಾಮಲಿಂಗಾರೆಡ್ಡಿಯನ್ನು ಸಮಾಧಾನಿಸಿದರು. ಬಳಿಕ ರೆಡ್ಡಿ ಸದನದಿಂದ ಹೊರ ನಡೆದರು.